## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೋಲಾರ

ಕೆ.ಎಸ್.ಎಸ್. ಅಂಚೆ, ಚಿಕ್ಕಹಸಾಳ, ಕೋಲಾರ ಜಿಲ್ಲೆ, ಕೋಲಾರ

# ರಾಷ್ಟ್ರೀಯ ಶಿಕ್ಷಣ ನೀತಿ–2020 ಶಾಲಾ ಶಿಕ್ಷಣ ಸಂಬಂಧಿತ ಅಂಶಗಳ ಸಂಕ್ಷಿಪ್ತ ಪ್ರಸ್ತುತಿ

ರಾಷ್ಟ್ರೀಯ ಶಿಕ್ಷಣ ನೀತಿಯು ಭಾರತ ಕೇಂದ್ರಿತ ಶಿಕ್ಷಣ ವ್ಯವಸ್ಥೆಯೊಂದಿಗೆ ಸರ್ವರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ನಮ್ಮ ಸಮಾಜವನ್ನು ಒಂದು ಸುಸ್ಥಿರ, ಸಮಾನ ಹಾಗೂ ಜೀವಂತಿಕೆಯುಳ್ಳ ಸಮಾಜವನ್ನಾಗಿ ಮಾರ್ಪಡಿಸಲು ಶ್ರಮಿಸುತ್ತದೆ.

## ಪೀಠಿಕೆ

ಪ್ರತಿಯೊಬ್ಬ ನಾಗರೀಕರ ಜೀವನವನ್ನು ತಲುಪುವ ಹಾಗೂ ನಮ್ಮ ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡಲು ಬೇಕಾದ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿರುವಂತಹ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಪಡಿಸುವ ಮತ್ತು ಮತ್ತೊಂದೆಡೆ ಸಮಾನ ಮತ್ತು ನ್ಯಾಯಯುತ ಸಮಾಜವನ್ನು ರೂಪಿಸುವ ಒಂದು ಶಿಕ್ಷಣ ವ್ಯವಸ್ಥೆಯನ್ನು ರಚಿಸುವ ದೃಷ್ಟಿಕೋನದೊಂದಿಗೆ 2020 ರ ಜುಲೈ29 ರಂದು ರಾಷ್ಟ್ರೀಯ ಶಿಕ್ಷಣ ನೀತಿ–2020 ಅನ್ನು ಮಾನ್ಯ ಪ್ರಧಾನ ಮಂತ್ರಿಗಳು ರಾಷ್ಟ್ರಕ್ಕೆ ಪರಿಚಯಿಸಿದರು.

## ನೀತಿಯ ಮುಖ್ಯ ಅಂಶಗಳು

### ಶಾಲಾ ಶಿಕ್ಷಣ

- **ಪ್ರಾರಂಭಿಕ ಬಾಲ್ಯ ಶಿಕ್ಷಣ:** ಪ್ರಾರಂಭಿಕ ಬಾಲ್ಯ ಶಿಕ್ಷಣದ ಮಹತ್ವಕ್ಕೆ ಒತ್ತು, 3–6 ವರ್ಷ ವಯೋಮಾನದ ಎಲ್ಲಾ ಮಕ್ಕಳಿಗೆ 2025ರ ವೇಳೆಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಧ್ಯೇಯ.
- **ಸಾಕ್ಷರತೆ ಮತ್ತು ಗಣಿತ ಕೌಶಲಗಳ ಕಲಿಕೆಗೆ ಸುಭದ್ರ ಅಡಿಪಾಯ:** 1–5ನೇ ತರಗತಿ ಮಕ್ಕಳಿಗೆ ಭಾಷಾ ಕಲಿಕೆ ಮತ್ತು ಗಣಿತ ಕೌಶಲಗಳ ಕಲಿಕೆಗೆ ವಿಶೇಷ ಗಮನ. 2025ರ ವೇಳೆಗೆ 5 ಮತ್ತು ಮೇಲಿ ತರಗತಿಯ ಪ್ರತಿ ವಿದ್ಯಾರ್ಥಿಗೆ ಪ್ರಾರಂಭಿಕ ಭಾಷಾ ಸಾಮರ್ಥ್ಯ ಮತ್ತು ಗಣಿತ ಕೌಶಲಗಳ ಗಳಿಕೆ ಖಾತರಿ
- **ಪಠ್ಯಕ್ರಮ ಹಾಗೂ ಶಿಕ್ಷಣ ಕ್ರಮ:** ಮಕ್ಕಳ ಮೆದುಳಿನ ಬೆಳವಣಿಗೆ ಹಾಗೂ ಕಲಿಕೆಗೆ ಸೂಕ್ತವಾದ ಶೈಕ್ಷಣಿಕ ಕ್ರಮ
- **ಪಠ್ಯಕ್ರಮದ ಮಾದರಿ:** 5 + 3 + 3 + 4
- ಭಾಷೆ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಕಲೆ ಮತ್ತು ಕ್ರೀಡೆಗಳಿಗೆ ಸಮಾನ ಆದ್ಯತೆ
- ಶೈಕ್ಷಣಿಕ ಮತ್ತು ಔದ್ಯೋಗಿಕ ಶಿಕ್ಷಣಗಳನ್ನು ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಒಂದಾಗಿ ಬೆಸೆಯುವುದು.
- **ಸಾರ್ವತ್ರಿಕ ದಾಖಲಾತಿ:** ಹಲವಾರು ಕ್ರಮಗಳ ಮೂಲಕ 2030 ವೇಳೆಗೆ 100% ದಾಖಲಾತಿಯ ಖಾತರಿ.
- **ಸಮಾನ ಹಾಗೂ ಎಲ್ಲರನ್ನೂ ಒಳಗೊಂಡ ಶಿಕ್ಷಣ:** ತನ್ನ ಹುಟ್ಟು, ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆಯ ಕಾರಣದಲ್ಲಿ ಕಲಿಕಾ ಅವಕಾಶದಿಂದ ವಂಚಿತವಾಗದಿರಲು ಕ್ರಮಗಳು.
- **ಶಾಲಾ ಶಿಕ್ಷಕರ ನೇಮಕಾತಿ:** ಉತ್ತಮ ಹಾಗೂ ಪಾರದರ್ಶಿಕ ಪ್ರಕ್ರಿಯೆ, ಅರ್ಹತೆಯ ಮೇರೆಗೆ ಮುಂಬಡ್ತಿ, ಶಿಕ್ಷಣ ತಜ್ಞರು ಮತ್ತು ಶೈಕ್ಷಣಿಕ ಆಡಳಿತಗಾರರಾಗಿ ಕಾರ್ಯನಿರ್ವಹಿಸಲು ನೆರವಾಗುವಂತೆ ಕಾಲಕಾಲಕ್ಕೆ ಬಹು ಮೂಲಗಳಿಂದ ಮೌಲ್ಯಮಾಪನ.
- **ಶಾಲಾ ಆಡಳಿತ:** ಶಾಲಾ ಸಂಕೀರ್ಣಗಳ ನಿರ್ಮಾಣ (10 – 20 ಶಾಲೆಗಳ ಗುಂಪು) – ಶಾಲಾ ಆಡಳಿತದ ಮೂಲ ಘಟಕ, ವೃತ್ತಿಪರ ಶಿಕ್ಷಕರು, ಮೂಲಭೂತ ಸೌಕರ್ಯಗಳು, ಶೈಕ್ಷಣಿಕ ಮತ್ತು ಮಾನವ ಸಂಪನ್ಮೂಲಗಳ ಲಭ್ಯತೆಯ ಖಾತರಿ.
- **ಶಾಲಾ ನಿಯಂತ್ರಣ:** ಶಾಲಾ ಕಾರ್ಯನಿರ್ವಹಣೆ ಹಾಗೂ ನಿಯಂತ್ರಣಗಳನ್ನು ಭಿನ್ನ ಭಿನ್ನ ಸಂಸ್ಥೆಗಳ ಮೂಲಕ ಜಾರಿ, ನೀತಿ ನಿರೂಪಣೆ, ನಿಯಂತ್ರಣ, ಕಾರ್ಯಾಚರಣೆ ಮತ್ತು ಶೈಕ್ಷಣಿಕ ವಿಷಯಗಳನ್ನು ನಿರ್ವಹಿಸಲು ಭಿನ್ನ ಭಿನ್ನವಾದ ಹಾಗೂ ಸ್ಪಷ್ಟವಾದ ವ್ಯವಸ್ಥೆಗಳ ರಚನೆ.
- ಶಿಕ್ಷಕರ ಶಿಕ್ಷಣ ಮತ್ತು ತರಬೇತಿ–ಶಿಸ್ತುಬದ್ಧ ಶಿಕ್ಷಕರ ತರಬೇತಿ ಕಾರ್ಯಕ್ರಮಗಳು, ಬಹು ಶಿಸ್ತೀಯ, ಚಟುವಟಿಕಾಯುಕ್ತವಾಗಿರುವಂತೆ ಉನ್ನತ ಶಿಕ್ಷಣ ಸಂಸ್ಥೆಗಳ ಮೂಲಕ ನಿರ್ವಹಣೆ.
- ಶಿಕ್ಷಕರನ್ನು ರೂಪಿಸಲು 4 ವರ್ಷಗಳ ಸಂಯೋಜಿತ, ಸ್ತರನಿರ್ದಿಷ್ಟ, ವಿಷಯ ನಿರ್ದಿಷ್ಟ ಶಿಕ್ಷಣ ಪದವಿ ಕೋರ್ಸುಗಳು.
- ಬಹುಶಿಸ್ತೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರ ಶಿಕ್ಷಣ.
- ಔದ್ಯೋಗಿಕ ಶಿಕ್ಷಣ–ಸಾಮಾನ್ಯ ಶಿಕ್ಷಣದ ಅವಿಭಾಜ್ಯ ಅಂಗ.
- 2025ರ ವೇಳೆಗೆ ಕನಿಷ್ಠ 50% ವಿದ್ಯಾರ್ಥಿಗಳಿಗೆ ಔದ್ಯೋಗಿಕ ಶಿಕ್ಷಣ ನೀಡುವ ಗುರಿ
- ರಾಷ್ಟ್ರೀಯ ಸಂಶೋಧನಾ ಸಂಸ್ಥೆ (National Research Foundation)– ದೇಶಾದ್ಯಂತ ಸಂಶೋಧನೆ ಮತ್ತು ಅವಿಷ್ಕಾರಗಳ ವೇಗವರ್ಧನೆ ಮತ್ತು ವಿಸ್ತರಣೆಗೆ ಹೊಸ ಘಟಕದ ಸ್ಥಾಪನೆ

## ಪ್ರಾರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಬಲವರ್ಧನೆ

- ಬಾಲ್ಯದ ಶಿಕ್ಷಣ ಸೌಲಭ್ಯಗಳ ಗಮನಾರ್ಹ ವಿಸ್ತರಣೆ ಮತ್ತು ಬಲಪಡಿಸುವಿಕೆ, ಸ್ಥಳೀಯ ಅಗತ್ಯತೆಗಳು, ಭೌಗೋಳಿಕತೆ ಮತ್ತು ಅಸ್ತಿತ್ವದಲ್ಲಿರುವ ಮೂಲ ಸೌಕರ್ಯಗಳ ಕುರಿತು ಬಹುಮುಖಿ ವಿಧಾನಗಳ ಬಳಕೆ.
- ಪ್ರಾರಂಭಿಕ ಬಾಲ್ಯದ ಶಿಕ್ಷಣಕ್ಕಾಗಿ ಪಠ್ಯಕ್ರಮ ಮತ್ತು ಶೈಕ್ಷಣಿಕ ಚೌಕಟ್ಟು – ಶಿಕ್ಷಕರು ಮತ್ತು ಪೋಷಕರಿಗೆ ಪ್ರತ್ಯೇಕವಾಗಿ ರೂಪಣೆ– ಇದು 0 – 3 ವರ್ಷದವರೆಗಿನ ಮಕ್ಕಳ ಬುದ್ಧಿಮತ್ತೆಯ ಬೆಳವಣಿಗೆಗಾಗಿ ಸೂಕ್ತ ಮಾರ್ಗದರ್ಶಿ ಸೂತ್ರಗಳು ಹಾಗೂ 3 ರಿಂದ 8 ವರ್ಷದವರೆಗಿನ ಮಕ್ಕಳಿಗೆ ಶೈಕ್ಷಣಿಕ ಮಾರ್ಗದರ್ಶಿ ಸೂತ್ರಗಳನ್ನು ನೀಡುತ್ತದೆ.
- ಬಾಲ್ಯ ಹಂತದ ಶಿಕ್ಷಣದ ಎಲ್ಲಾ ಅಂಶಗಳು ಶಿಕ್ಷಣ ಸಚಿವಾಲಯದ ವ್ಯಾಪ್ತಿಗೆ (ಎಂ.ಎಚ್.ಆರ್.ಡಿ. ಶಿಕ್ಷಣ ಇಲಾಖೆಯಾಗಿ ಮರುನಾಮಕರಣ) ಇದನ್ನು ಸಾಕಾರಗೊಳಿಸಲು ಶಿಕ್ಷಣ ಸಚಿವಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಗಳ ಸಹಯೋಗ.
- ಶಾಲಾ ಪೂರ್ವ ಶಿಕ್ಷಣದ ನೀತಿ ನಿಯಮಾವಳಿಗಳ ಅನುಸರಣೆಗಾಗಿ ಪರಿಣಾಮಕಾರಿಯಾದ ಗುಣಮಟ್ಟದ ನಿಯಂತ್ರಣಾ ಮತ್ತು ಮಾನ್ಯತಾ ವ್ಯವಸ್ಥೆಯ ಜಾರಿ
- 3 ರಿಂದ 6 ವರ್ಷದವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ಶಿಕ್ಷಣ ಹಕ್ಕು ಕಾಯ್ದೆಯ 2009 ರ ವಿಸ್ತರಣೆ

## ಶಿಕ್ಷಣದ ಪ್ರತಿ ಹಂತದಲ್ಲಿ ಸಾರ್ವತ್ರಿಕ ದಾಖಲಾತಿ, ಧಾರಣತೆ

- 2030ರ ವೇಳಗೆ ಶಾಲಾ ಪೂರ್ವ ಹಂತದಿಂದ ಪ್ರೌಢಶಾಲಾ ಹಂತದವರೆಗೆ 100% ದಾಖಲಾತಿ ಸಾಧನೆಗೆ ಕ್ರಮಗಳು.
- ಶಾಲೆಗಳ ಪ್ರವೇಶಾತಿ ಸಂಖ್ಯೆಯ ಹೆಚ್ಚಳ, ಕಡಿಮೆ ಸೌಲಭ್ಯಗಳಿರುವಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದು, ಸಾರಿಗೆ ಮತ್ತು ವಿದ್ಯಾರ್ಥಿ ನಿಲಯಗಳನ್ನು ಒದಗಿಸುವ ಮೂಲಕ ಪ್ರವೇಶದ ನ್ಯೂನತೆಗಳನ್ನು ಸರಿಪಡಿಸುವುದು.
- ದೀರ್ಘಾವಧಿ ಶಾಲೆಯಿಂದ ಹೊರಗುಳಿಯುವ ಹದಿಹರೆಯದವರಿಗೆ ವಿಶೇಷ ಕಾರ್ಯಕ್ರಮಗಳು, ದೂರ ಶಿಕ್ಷಣ ವ್ಯವಸ್ಥೆ, ತಂತ್ರಜ್ಞಾನದ ಬಳಕೆ, ಔಪಚಾರಿಕ ಮತ್ತು ಅನೌಪಚಾರಿಕ ವಿಧಾನಗಳ ಮೂಲಕ ಕಲಿಕೆಯ ಸಾಧ್ಯತೆಗಳ ಬಲವರ್ಧನೆ.
- ಶಾಲೆಗಳಲ್ಲಿ ಆರೋಗ್ಯ ಕಾರ್ಯಕರ್ತರ ನೇಮಕ, ವಿದ್ಯಾರ್ಥಿಗಳು, ಪೋಷಕರು ಮತ್ತು ಸಮಾಜದಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಹಾಗೂ ಸೂಕ್ತ ಆರೋಗ್ಯ ಸೇವೆಗಳನ್ನು ಒದಗಿಸುವುದು.
- ಸುರಕ್ಷತೆ, ಪ್ರವೇಶ ಮತ್ತು ಸೇರ್ಪಡೆ, ಶಾಲೆಗಳ ಲಾಭರಹಿತ ಸ್ವರೂಪ ಮತ್ತು ಕಲಿಕೆಯ ಫಲಿತಾಂಶಗಳಿಗೆ ಕನಿಷ್ಠ ಮಾನದಂಡಗಳನ್ನು ಖಾತರಿಪಡಿಸುವಾಗ ಶಿಕ್ಷಣ ಹಕ್ಕು ಕಾಯ್ದೆಯ ಅವಶ್ಯಕತೆಗಳ ಗಣನೀಯ ಸಡಿಲಿಕೆ – ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಶಾಲೆಗಳನ್ನು ಪ್ರಾರಂಭಿಸಲು ಸುಲಭ ಮಾಡಿಕೊಡುವುದು.
- ಶಾಲಾ ಪೂರ್ವ ಶಿಕ್ಷಣದಿಂದ 12ನೇ ತರಗತಿಯವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಖಚಿತಪಡಿಸಿಕೊಳ್ಳಲು ಶಿಕ್ಷಣ ಹಕ್ಕು ಕಾಯ್ದೆಯ ವಿಸ್ತರಣೆ.

## ಶಾಲಾ ಶಿಕ್ಷಣಕ್ಕಾಗಿ ಹೊಸ ಪಠ್ಯಕ್ರಮ ಮತ್ತು ಬೋಧನಾಕ್ರಮ

- 5 + 3 + 3 + 4 ವಿನ್ಯಾಸದ ಆಧಾರದ ಮೇಲೆ ಪಠ್ಯಕ್ರಮ ಮತ್ತು ಬೋಧನಾ ಕ್ರಮ ಹಾಗೂ ಶಾಲಾ ಶಿಕ್ಷಣದ ಪಠ್ಯಕ್ರಮ ಚೌಕಟ್ಟು.
  - **ಬುನಾದಿಯ ಹಂತ (3–8 ವರ್ಷ):** ಮೆದುಳಿನ ತೀವ್ರಗತಿಯ ಬೆಳವಣಿಗೆ, ಆಟ ಮತ್ತು ಹೊಸತನ್ನು ಹುಡುಕುವ ಆಧಾರದ ಮೇಲೆ ಕಲಿಕೆ.
  - **ಪೂರ್ವಸಿದ್ಧತಾ ಹಂತ (8–11 ವರ್ಷ):** ಆಟಗಳ ಮೂಲಕ ಮತ್ತು ಹೊಸತನ್ನು ಕಂಡುಹಿಡಿಯುವ ಮೂಲಕ ಬೆಳವಣಿಗೆ – ರಚನಾತ್ಮಕ ಕಲಿಕೆಗೆ ಪರಿವರ್ತನೆ ಆರಂಭ.
  - **ಮಧ್ಯಮ ಹಂತ (11–14 ವರ್ಷ):** ವಿಷಯಗಳಲ್ಲಿ ಪರಿಕಲ್ಪನೆಗಳ ಕಲಿಕೆ, ಹದಿಹರೆಯದ ಅನುಭವಗಳು.
  - **ಪ್ರೌಢ ಹಂತ (14–18 ವರ್ಷ):** ಜೀವನೋಪಾಯ ಮತ್ತು ಉನ್ನತ ಶಿಕ್ಷಣಕ್ಕಾಗಿ ತಯಾರಿ ಮತ್ತು ಯೌವನಕ್ಕೆ ಪದಾರ್ಪಣೆ.
- ಪ್ರೌಢ ಹಂತ (4 ವರ್ಷ, 14–18ರ ವಯೋಮಾನ): ವಿಮರ್ಶಾತ್ಮಕ ಚಿಂತನೆ, ವಿಷಯದ ಆಳವಾದ ಅಧ್ಯಯನ, ಜೀವನದ ಆಸೆ, ಆಕಾಂಕ್ಷೆಗಳತ್ತ ಗ್ರಮನ ಮತ್ತು ವಿದ್ಯಾರ್ಥಿಗಳಿಗೆ ಕಲಿಕೆಯ ವಿಷಯಗಳ ಆಯ್ಕೆಯಲ್ಲಿ ಸ್ವಾತಂತ್ರ್ಯ.
- ಸರ್ವತೋಮುಖ ಕಲಿಕೆಯ ಸಾಧನೆಗಾಗಿ ಶಾಲಾ ಶಿಕ್ಷಣದ ವಿಷಯಗಳು ಮತ್ತು ಪ್ರಕ್ರಿಯೆಗಳ ಮರುರೂಪಣ– ಆಳವಾದ ಮತ್ತು ಅನುಭವ ಆಧಾರಿತ ಕಲಿಕೆಗಾಗಿ ಮುಖ್ಯ ವಿಷಯಗಳು. ಮುಖ್ಯ ವಿಚಾರಗಳ ಕಲಿಕೆಗಾಗಿ ಪಠ್ಯಕ್ರಮದ ಹೊರೆಯನ್ನು ಇಳಿಸುವ ಕ್ರಮಗಳ ಪ್ರಸ್ತಾವನೆ.

- ಭಾಷಾ ಕೌಶಲಗಳು, ವೈಜ್ಞಾನಿಕ ಮನೋಭಾವ, ಕಲೆ ಮತ್ತು ಸೌಂದರ್ಯಪ್ರಜ್ಞೆ, ಸಂವಹನ, ನೈತಿಕತೆ, ಡಿಜಿಟಲ್ ಸಾಕ್ಷರತೆ, ಭಾರತದ ಬಗ್ಗೆ ತಿಳಿವಳಿಕೆ, ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ಸಮುದಾಯಗಳ ಸವಾಲುಗಳ ಬಗ್ಗೆ ತಿಳಿದುಕೊಳ್ಳಲು ಪ್ರೋತ್ಸಾಹ.
- ಸುಲಭಸಾಧ್ಯ ಪಠ್ಯಕ್ರಮ: ಪಠ್ಯಕ್ರಮ, ಪಠ್ಯೇತರ ಅಥವಾ ಹೆಚ್ಚುವರಿ–ಪಠ್ಯೇತರ ಕ್ಷೇತ್ರಗಳನ್ನು ಕಠಿಣವಾಗಿ ಪ್ರತ್ಯೇಕಿಸದಿರುವುದು; ಕಲೆ ಮತ್ತು ವಿಜ್ಞಾನ, ವೃತ್ತಿಪರ ಮತ್ತು ಶೈಕ್ಷಣಿಕ ಸ್ಟ್ರೀಮ್‌ಗಳನ್ನು ಮಾಧ್ಯಮಿಕ ಶಾಲಾ ಹಂತದಲ್ಲಿ ಬದಲಾಯಿಸುವ ಅವಕಾಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ಆಯ್ಕೆ
- ಶಾಲಾ ಶಿಕ್ಷಣ ಕನಿಷ್ಠ 5ನೇ ತರಗತಿಯವರೆಗೆ, ಸಾಧ್ಯವಾದಲ್ಲಿ 8ನೇ ತರಗತಿಯವರೆಗೆ ಸ್ಥಳೀಯ ಭಾಷೆ/ಮಾತೃಭಾಷೆಯಲ್ಲಿ ನೀಡುವುದು, ಅಗತ್ಯವೆನಿಸಿದೆಡೆ ಸುಲಭ ಸಾಧ್ಯವಾದ ದ್ವಿಭಾಷಾ ವಿಧಾನದ ಬಳಕೆ.
- ವಿದ್ಯಾರ್ಥಿಗಳ ಅಗತ್ಯತೆಗೆ ಅನುಗುಣವಾಗಿ ಸ್ಥಳೀಯ ಭಾಷಾ ಪಠ್ಯಪುಸ್ತಕಗಳನ್ನು ಒದಗಿಸುವುದು, ದಿವ್ಯಾಂಗರಿಗೆ ವಿಶೇಷ ಪಠ್ಯಪುಸ್ತಕಗಳ ಅಭಿವೃದ್ಧಿ
- ದೇಶದೆಲ್ಲೆಡೆ ತ್ರಿಭಾಷಾ ಸೂತ್ರವನ್ನು ಅಳವಡಿಸಿಕೊಳ್ಳಲಾಗುವುದು, ಭಾಷಾ ಶಿಕ್ಷಕರ ತರಬೇತಿ ಮತ್ತು ನೇಮಕಕ್ಕೆ ವಿಶೇಷ ಕ್ರಮಗಳು.
- 6 ರಿಂದ 8ನೇ ತರಗತಿಯಲ್ಲಿ ವೃತ್ತಿಪರ ಕೌಶಲ ಮತ್ತು ಕರಕುಶಲತೆಯ ಬಗ್ಗೆ ಎಲ್ಲಾ ವಿದ್ಯಾರ್ಥಿಗಳಿಗೆ ಸರ್ವೇ ಕೋರ್ಸ್‌ನೊಂದಿಗೆ ವೃತ್ತಿಪರ ಶಿಕ್ಷಣದ ಪರಿಚಯ; 9 ರಿಂದ 12ನೇ ತರಗತಿ ಮಕ್ಕಳಿಗೆ ಹೆಚ್ಚು ಸಾಂಪ್ರದಾಯಿಕ ಶೈಕ್ಷಣಿಕ ಕೋರ್ಸ್‌ಗಳ ಜೊತೆಗೆ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಒದಗಿಸುವುದು – ವಿದ್ಯಾರ್ಥಿಗಳಿಗೆ ಮಿಕ್ಸ್ ಮತ್ತು ಮ್ಯಾಚ್ ಆಯ್ಕೆ
- ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು: 2020ರ ವೇಳೆಗೆ ಪುನರ್ ಪರಿಶೀಲನೆ, ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟ, ಹೊಸ ಪಠ್ಯಪುಸ್ತಕಗಳ ಅಭಿವೃದ್ಧಿ.
- ವಿದ್ಯಾರ್ಥಿಗಳ ಅಭಿವೃದ್ಧಿಗೆ ಪೂರಕವಾದ ಮೌಲ್ಯಮಾಪನ ಕ್ರಮಗಳು – ಎಲ್ಲಾ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ವಿಷಯ ಗ್ರಹಿಕೆ, ಕೌಶಲಗಳು ಮತ್ತು ಇತರ ಉನ್ನತ ಮಟ್ಟದ ಕೌಶಲಗಳ ಪರೀಕ್ಷೆ.
- 2025ರ ವೇಳೆಗೆ ಮಾಧ್ಯಮಿಕ ಶಾಲಾ ಹಂತ ಮತ್ತು ಮೇಲ್ಪಟ್ಟ ಹಂತಗಳಲ್ಲಿ ತರಗತಿಗಳ ಮೌಲ್ಯಮಾಪನ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳ ಮೂಲಕ.
- 2020/2021 ರಿಂದ ಸ್ವಾಯುತ್ತ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಅಭಿಕ್ಷಮತಾ ಪರೀಕ್ಷೆಗಳನ್ನು ಮತ್ತು ವಿವಿಧ ವಿಷಯಗಳ ಪರೀಕ್ಷೆಗಳನ್ನು ನಿರ್ವಹಿಸುತ್ತದೆ. ಇವುಗಳನ್ನು ವರ್ಷದಲ್ಲಿ ಅನೇಕ ಸಂದರ್ಭಗಳಲ್ಲಿ ತೆಗೆದುಕೊಳ್ಳಲು ಅವಕಾಶ.
- 4 ವರ್ಷದ ಸಂಯೋಜಿತ ಬಿ.ಎಡ್. ಕೋರ್ಸ್: ದಾಖಲಾತಿಗಾಗಿ ಹಿಂದುಳಿದ ವರ್ಗಗಳು, ಗ್ರಾಮೀಣ ವಿದ್ಯಾರ್ಥಿಗಳು ಮತ್ತು ಆದಿವಾಸಿ ಪ್ರದೇಶಗಳ ವಿದ್ಯಾರ್ಥಿಗಳಿಗೆ ಅರ್ಹತೆ ಆಧಾರಿತ ವಿದ್ಯಾರ್ಥಿ ವೇತನ –ಕೆಲವು ಸಂದರ್ಭಗಳಲ್ಲಿ ಸ್ಥಳೀಯವಾಗಿ ಉದ್ಯೋಗ ನೀಡುವಿಕೆ – ನಿರ್ದಿಷ್ಟವಾಗಿ ಮಹಿಳಾ ವಿದ್ಯಾರ್ಥಿಗಳಿಗೆ ಪ್ರಾಮುಖ್ಯತೆ.
- ಶಾಲೆಗಳಲ್ಲಿ ಶಿಕ್ಷಕರ ಅವಶ್ಯಕತೆ ಯೋಜನೆ ಆಧಾರಿತವಾಗಿ ದೃಢವಾದ ಪ್ರಕ್ರಿಯೆಯ ಮೂಲಕ ಶಿಕ್ಷಕರ ನೇಮಕಾತಿ. ಸ್ಥಳೀಯರು ಮತ್ತು ಸ್ಥಳೀಯ ಭಾಷೆಯಲ್ಲಿ ಪ್ರೌಢಿಮೆ ಇರುವವರಿಗೆ ಆದ್ಯತೆ.
- ಶಿಕ್ಷಕರ ನೇಮಕಾತಿಯ ಮೊದಲ ಹಂತ: ಮರುವಿನ್ಯಾಸಗೊಳಿಸಲಾದ ಶಿಕ್ಷಕರ ಅರ್ಹತಾ ಪರೀಕ್ಷೆ, ನಂತರ ಸಂದರ್ಶನ ಮತ್ತು ಬೋಧನಾ ಪ್ರಾತ್ಯಕ್ಷಿಕೆ.
- ಜಿಲ್ಲಾ ಮಟ್ಟದಲ್ಲಿ ಶಿಕ್ಷಕರ ನೇಮಕಾತಿ ಮತ್ತು ಶಾಲಾ ಸಂಕೀರ್ಣಕ್ಕೆ ನೇಮಕಾತಿ – ಪಾರದರ್ಶಕ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯ ಮೂಲಕ ಸ್ಥಿರ ಅವಧಿ ಮತ್ತು ನಿಯಮ ಆಧಾರಿತ ವರ್ಗಾವಣೆ.
- ಗ್ರಾಮೀಣ ಪ್ರದೇಶದಲ್ಲಿ ಕಲಿಸುವವರಿಗೆ ಪ್ರೋತ್ಸಾಹ ಧನ.
- ಪ್ಯಾರಾ ಶಿಕ್ಷಕರು (ಗುತ್ತಿಗೆ) – 2022ರ ವೇಳೆಗೆ ದೇಶಾದ್ಯಂತ ನಿಲುಗಡೆ.
- ಶಿಕ್ಷಕರ ನಿರಂತರ ವೃತ್ತಿಪರತೆಯ ಅಭಿವೃದ್ಧಿಗೆ ಆದ್ಯತೆ – ಹೊಸ ಶಿಕ್ಷಕರಿಗೆ ಮಾರ್ಗದರ್ಶನ
- ಆಯ್ಕೆ ಆಧಾರಿತ ವೃತ್ತಿಪರ ಅಭಿವೃದ್ಧಿಯನ್ನು ಸಕ್ರಿಯಗೊಳಿಸಲು ಮತ್ತು ವೃತ್ತಿಪರತೆಯನ್ನು ಹೆಚ್ಚಿಸಲು ತಂತ್ರಜ್ಞಾನ ಆಧಾರಿತ ವ್ಯವಸ್ಥೆಯ ಅಳವಡಿಕೆ.
- ಶಿಕ್ಷಕರ ವೃತ್ತಿಪರತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಕೇಂದ್ರೀಕೃತ ಪಠ್ಯಕ್ರಮ, ಮೇಲಿನಿಂದ ನಿರ್ಧಾರವಾದ ತರಬೇತಿ ವಿಧಾನಗಳು, ಅತಿಯಾದ ಕಟ್ಟುನಿಟ್ಟಿನ ನಿಯಮಾವಳಿಗಳು ಇರುವುದಿಲ್ಲ.
- ಶಿಕ್ಷಕರು ವೃತ್ತಿಪರತೆಯಿಂದ ಕಾರ್ಯನಿರ್ವಹಿಸಲು ಅಗತ್ಯವಾದ ಮೂಲಭೂತ ಭೌತ ಸೌಲಭ್ಯಗಳು ಮತ್ತು ಕಲಿಕಾ ಸಂಪನ್ಮೂಲಗಳ ಒದಗಿಸುವಿಕೆ.
- ಶಿಕ್ಷಕ ವಿದ್ಯಾರ್ಥಿಯ ಅನುಪಾತ ನಿರ್ಧರಣೆ – ವಿದ್ಯಾರ್ಥಿಗಳ ಕಲಿಕೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಹಂತಗಳಲ್ಲಿ ಪರಿಹಾರ ಕಾರ್ಯಕ್ರಮಗಳ ಆಯೋಜನೆ.
- ತರಗತಿ ಬೋಧನೆಗೆ ಶಿಕ್ಷಕರ ಅಡಚಣೆಯನ್ನು ತಡೆಗಟ್ಟಲು ಕ್ರಮ.
- ಯಾವುದೇ ಕಾರಣವಿಲ್ಲದೆ ಅಥವಾ ಅನುಮೋದಿತ ರಜೆ ಇಲ್ಲದೆ ಶಾಲೆಗೆ ಗೈರು ಹಾಜರಾಗುವಂತಿಲ್ಲ. ಪ್ರತಿ ಮುಖ್ಯ ಶಿಕ್ಷಕರು/ಪ್ರಾಂಶುಪಾಲರಿಗೆ ಸುಭದ್ರವಾದ ಶಾಲಾಭಿವೃದ್ಧಿ ಪ್ರಕ್ರಿಯೆ ಮತ್ತು ಪೋಷಕ ಶಾಲಾ ಸಂಸ್ಕೃತಿಯನ್ನು ನಿರ್ಮಿಸುವ ಜವಾಬ್ದಾರಿ.
- ಕನಿಷ್ಠ ವರ್ಷಗಳ ಬೋಧನಾ ಅನುಭವದ ನಂತರ ಎಲ್ಲಾ ಶಿಕ್ಷಕರಿಗೆ ಶಿಕ್ಷಕರ ಶಿಕ್ಷಣ ತರಬೇತಿ ಅಥವಾ ಶೈಕ್ಷಣಿಕ ಆಡಳಿತ ನಡೆಸಲು ಅರ್ಹತೆ.
- ದೀರ್ಘಕಾಲದಲ್ಲಿ ಎಲ್ಲಾ ಶೈಕ್ಷಣಿಕ ಆಡಳಿತ ಹುದ್ದೆಗಳಿಗೆ ಆಸಕ್ತ ಅತ್ಯುತ್ತಮ ಶಿಕ್ಷಕರಿಗೆ ಅವಕಾಶ.

## ಶಾಲಾ ಶಿಕ್ಷಣದ ನಿಯಂತ್ರಣ

- ಎಸ್.ಸಿ.ಇ.ಆರ್.ಟಿ ಪ್ರತಿ ಶಾಲೆಯ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತೆಯ ಚೌಕಟ್ಟನ್ನು ಅಭಿವೃದ್ಧಿ ಪಡಿಸುತ್ತದೆ. ಇದನ್ನು ಶಾಲಾ ನಿಯಂತ್ರಣ ಪ್ರಾಧಿಕಾರವು ಮಾನ್ಯತೆ ನೀಡುವ ವ್ಯವಸ್ಥೆಯನ್ನು ಆಧರಿಸಿ ಶಾಲೆಗಳ ನಿಯಂತ್ರಣಕ್ಕಾಗಿ ಬಳಸುತ್ತದೆ.
- ಶಾಲೆಗಳು ಮತ್ತು ಶಾಲಾ ವ್ಯವಸ್ಥೆಗಳಿಗೆ ಪಠ್ಯಕ್ರಮವನ್ನು ಆಯ್ಕೆ ಮಾಡುವ ಅವಕಾಶ – ಇದು ರಾಷ್ಟ್ರೀಯ/ರಾಜ್ಯ ಪಠ್ಯಕ್ರಮದ ಚೌಕಟ್ಟಿಗೆ ಪೂರಕವಾಗಿರಬೇಕು.
- ವಿದ್ಯಾರ್ಥಿಯ ಕಲಿಕಾ ಮಟ್ಟದ ಮಾದರಿ ಆಧಾರಿತ ರಾಷ್ಟ್ರೀಯ ಸಾಧನಾ ಸಮೀಕ್ಷೆ (National Achievement Survey) ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಮಿತಿಯು ನಿರ್ವಹಿಸುತ್ತದೆ. ಗಣತಿ ಆಧಾರಿತ ರಾಜ್ಯ ಮೌಲ್ಯಮಾಪನ ಸಮೀಕ್ಷೆಗಾಗಿ ರಾಜ್ಯಗಳಿಗೆ ಅವಕಾಶ ಇರುತ್ತದೆ.







diet.kolar@gmail.com

"ಕೋಲಾರ ಜಿಲ್ಲೆಯ ಕಲಿಕಾ ಸಮುದಾಯದ ಸಾಮರ್ಥ್ಯ ಹಾಗೂ ಶೈಕ್ಷಣಿಕ ನಾಯಕತ್ವ ರೂಪಿಸುವ ಸಂಶೋಧನಾ ನಿರತ ಸ್ವಾಯತ್ತ ಸಂಪನ್ಮೂಲ ಕೇಂದ್ರ"